# ಎನ್‌ಐಟಿಕೆ ವಿದ್ಯಾರ್ಥಿಗಳಿಗಾಗಿ ವಿಶೇಷವಾದ ಅನುಭವಾತ್ಮಕ ತರಬೇತಿ




**ಮಂಗಳೂರು:** ಎನ್‌ಐಟಿಕೆ ಸುರತ್ಕಲ್‌ನಲ್ಲಿ ನಡಾಲ್ ರೆಸೀಲಿಂಟ್ ಲೀಡರ್‌ಶಿಪ್ ಕಾರ್ಯಕ್ರಮದಡಿ ಮೊದಲ ಟ್ರೆಕ್ ಕಾರ್ಯಕ್ರಮ ನಡೆಯಿತು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಪ್ರದೇಶದಲ್ಲಿ ನಡೆದ ಈ ಟ್ರೆಕ್‌ನಲ್ಲಿ ಒಟ್ಟು 36 ವಿದ್ಯಾರ್ಥಿಗಳು ಭಾಗವಹಿಸಿದರು. ಈ ಟ್ರೆಕ್‌ನಲ್ಲಿ ದೈಹಿಕ ಸಾಮರ್ಥ್ಯ, ತಂಡ ಸಹಕಾರ ಹಾಗೂ ಪರಿಸರ ಜಾಗೃತಿಯನ್ನು ಒಳಗೊಂಡ ಅನುಭವಾತ್ಮಕ ತರಬೇತಿಯನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಯಿತು. ಟ್ರೆಕ್‌ನಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿ ಕೃತಿಕಾ ಸಿ.ಎಸ್. ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, 'ಈ ಟ್ರೆಕ್ ಸವಾಲಿನ ಜೊತೆಗೆ ಸಮೃದ್ಧ ಅನುಭವ ನೀಡಿತು. ಪ್ರಕೃತಿ ಪರಿಸರದ ಬಗ್ಗೆ ತಿಳಿಯುವ ಅವಕಾಶ ದೊರೆಯಿತು ಹಾಗೂ ಸಂಪೂರ್ಣ ಅನುಭವದ ಬಗ್ಗೆ ಚಿಂತನೆ ಮಾಡುವಂತಾಯಿತು' ಎಂದು ಹೇಳಿದರು.

## ವಿದ್ಯಾರ್ಥಿಗಳಲ್ಲಿ ಮೌಲ್ಯ ವೃದ್ಧಿ

ನಡಾಲ್ ಸಂಸ್ಥೆಯ ಉದ್ದೇಶ ದೈಹಿಕವಾಗಿ ಸದೃಢ, ಮಾನಸಿಕವಾಗಿ ಸ್ಥೈರ್ಯ ಹೊಂದಿರುವ ಮತ್ತು ನೈತಿಕ ಮೌಲ್ಯಗಳನ್ನು ಪಾಲಿಸುವ ನಾಯಕತ್ವ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದಾಗಿದೆ.

Hosa Digantha, Date: 03/04/2026, p.02